

# ಸಾಗರದಲ್ಲಿ ತೇಲುವ ಗಾಲ್ಫ್ ಮೈದಾನ



ಹಿಂದೂ ಮಹಾಸಾಗರದ 1192 ದ್ವೀಪಗಳಲ್ಲಿ ಮಾಲ್ದೀವ್ಸ್ ಕೂಡ ಒಂದು. ಈ ಸಮುದ್ರ ಮಟ್ಟದಿಂದ ಕೇವಲ ಐದು ಅಡಿ ಎತ್ತರದಲ್ಲಿ ಅದು ನಿಂತಿದೆ. ಈ ಸಮುದ್ರ ಮಟ್ಟದಿಂದ ಕೇವಲ ಐದು ಅಡಿ ಎತ್ತರದಲ್ಲಿ ಸಾಗರ ಉಕ್ಕೇರಿದರೆ ಮುಳುಗಿ ಎಲ್ಲ ದ್ವೀಪ ಸಮುದಾಯಗಳಿಗೂ ಕಾಲಾಂತರದಲ್ಲಿ ಸಾಗರ ಉಕ್ಕೇರಿದರೆ ಮುಳುಗಿ ಹೋಗುವ ಭಯ ತಪ್ಪಿದ್ದಲ್ಲ.

ಇದಕ್ಕಾಗಿ ಕೋಯರ್ ಡಿ ಅಲೆನ್ ರೆಸಾರ್ಟ್ ಗಾಲ್ಫ್ ಮೈದಾನವನ್ನು ಹಿಂದೂ ಮಹಾಸಾಗರದಲ್ಲಿ ನಿರ್ಮಾಣ ಮಾಡಲಾಗಿದೆ. ಈ ಐಷಾರಾಮೀ ಮೈದಾನಕ್ಕಾಗಿ 520 ದಶಲಕ್ಷ ಡಾಲರ್ ಖರ್ಚು ಮಾಡಲಾಗಿದೆ. ಸೌರಶಕ್ತಿಯನ್ನು ಧಾರಾಳವಾಗಿ ಬಳಸಿ ತಯಾರಾಗುವ ವಿದ್ಯುತ್ ಇಲ್ಲಿ ಬಳಕೆಯಾಗುತ್ತದೆ. 2013ರಲ್ಲಿ ಆರಂಭವಾದ ಗಾಲ್ಫ್ ಮೈದಾನದ ನಿರ್ಮಾಣ ಕಾರ್ಯ ಎರಡು ವರ್ಷಗಳಲ್ಲಿ ಮುಕ್ತಾಯಗೊಂಡಿದೆ. ಕಾಂಕ್ರೀಟ್ ಮತ್ತು ಫಾಲಿಸ್ಟೈರೀಸ್ ಚಪ್ಪಡಿಗಳಿಂದ ಸಿದ್ಧವಾಗಿದ್ದು ಅದರ ಅಂಚುಗಳಲ್ಲಿ ದೃಢವಾದ ಪಾಮ್ ಮರಗಳ ದಂಡೆಯಿದೆ. ವಾಸ್ತವವಾಗಿ ಒಂದು ದೋಣಿಯ ಆಕಾರದಲ್ಲಿರುವ ಈ ಮೈದಾನವು ಮುಳುಗುವ, ಬಿರುಗಾಳಿಯಿಂದ ಹಾನಿಗೊಳಗಾಗುವ ಭಯವಿಲ್ಲ. ಪ್ರಬಲ ಶಕ್ತಿಯಿರುವ ಕೇಬಲ್ ಬಳಸಿ ಸಾಗರದ ಆಳದಲ್ಲಿ ದೃಢಗೊಳಿಸಿದ್ದಾರೆ.

ಮೈದಾನ 200 ಎಕರೆ ವಿಸ್ತಾರದಲ್ಲಿದೆ. ಸ್ಕಾಟ್ ಮಿಲ್ಲರ್ ಎಂಬಾತ ಇದರ ವಿನ್ಯಾಸ ತಯಾರಿಸಿದ್ದಾರೆ. ಇದರಲ್ಲಿ ನಾಲ್ಕೂವರೆ ಮೈಲಿನಷ್ಟು ಕಾಂಕ್ರೀಟಿನ ರಸ್ತೆಯಿದೆ. ಸುಸಜ್ಜಿತ ಶೌಚಾಲಯಗಳಿವೆ. 2400 ಚದರ ಅಡಿಗಳಷ್ಟು ಕಾರ್ಪೆಟ್ ಹಾಸಿದಂತಿರುವ ಹಸಿರು ಹುಲ್ಲು ಬೆಳೆದ ಮೈದಾನವಿದೆ. 3500 ಚದರ ಅಡಿಗಳಿಗೆ ಹಸಿರು ಚಿಪ್ ಅಳವಡಿಸಲಾಗಿದೆ. ಗಾಢ ಕೆಂಪಿನ ಹಾಸಿಗೆಯಂತಿರುವ ನೆಲವೂ ಇದೆ.

ಮೈದಾನದಲ್ಲಿ ಗಾಲ್ಫ್ ಆಡಲು ಅನುಕೂಲವಾದ ಹದಿನೆಂಟು ಕುಳಿಗಳಿವೆ. ಆಟವಾಡಿದ ಬಳಿಕ ಕ್ರೀಡಾಪಟುಗಳು ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲಗಳಿರುವ ಕ್ಲಬ್ ಹೌಸ್ ಇದೆ.

■ ಪ.ರಾಮಕೃಷ್ಣ ಶಾಸ್ತ್ರಿ